ಉ) ಪೀಠ ಸ್ಥಾಪನೆಗೆ ಸ್ಥಳ ಆಯ್ಕೆ ಮಾಡುವ ವಿಷಯ ಗೌರವಾನ್ವಿತ ಮುಖ್ಯ ನ್ಯಾಯಾಧೀಶರ ಪರಿಶೀಲನೆಯಲ್ಲಿದ್ದು ಅದಕ್ಕಾಗಿ ಕಾಲಮಿತಿ ನಿರ್ದಿಷ್ಟಪಡಿಸಲಾಗಿಲ್ಲ.

ರಾಜ್ಯದ ಮುಖ್ಯಮಂತ್ರಿಗಳ ಜನಸ್ಪಂದನ ಕಾರ್ಯಕ್ರಮಗಳ ವಿವರವನ್ನು ಕುರಿತು

60 (264) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಕಳೆದ 2003ರ ಅಕ್ಟೋಬರ್ ತಿಂಗಳ 8 ರಿಂದ 13ರವರೆಗೆ ಜನಸ್ಪಂದನ ಕಾರ್ಯಕ್ರಮ ಹಮ್ಮಿಕೊಂಡಿದ್ದು ಸರ್ಕಾರಕ್ಕೆ ಗೊತ್ತಿದೆಯೇ;

ಆ) ಜನಸ್ಪಂದನವನ್ನು ಯಾವ ಯಾವ ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು;

ಇ) ಜನಸ್ಪಂದನದಲ್ಲಿ ಜಿಲ್ಲಾವಾರು ಬಂದ ಅರ್ಜಿಗಳ ಸಂಖ್ಯೆ ಎಷ್ಟು;

ಈ) ಬಂದಿರುವ ಅರ್ಜಿಗಳನ್ನು ಸರ್ಕಾರ ಪರಿಶೀಲಿಸಿದ ನಂತರ ಅನರ್ಹಗೊಳಿಸಿರುವ ಅರ್ಜಿಗಳೆಷ್ಟು; ಅನರ್ಹಗೊಳಿಸಿರುವುದಕ್ಕೆ ಕಾರಣಗಳೇನು;

ಉ) ಪರೀಶೀಲನೆಯಿಂದ ಅರ್ಹಗೊಂಡ ಅರ್ಜಿಗಳಲ್ಲಿ ಸರ್ಕಾರದಿಂದ ಪರಿಹಾರ ನೀಡಿದ ಅರ್ಜಿಗಳೆಷ್ಟು; ಪರಿಹಾರ ನೀಡದೆ ಉಳಿದಿರುವ ಅರ್ಜಿಗಳೆಷ್ಟು (ಪರಿಹಾರ ನೀಡಿದ ಮತ್ತು ನೀಡದೇ ಇರುವ ಅರ್ಜಿಗಳ ಮಾಹಿತಿ ನೀಡುವುದು)

ಊ) ಪರಿಹಾರ ನೀಡದೇ ಬಾಕಿ ಉಳಿಸಿಕೊಂಡಿರುವುದಕ್ಕೆ ಕಾರಣಗಳೇನು; ಯಾವ ಕಾಲಮಿತಿಯೊಳಗಾಗಿ ಕಲ್ಪಿಸಿಕೊಡಲಾಗುವುದು;

ಋ) ಜನಸ್ಪಂದನ ಕಾರ್ಯಕ್ರಮಕ್ಕಾಗಿ ಮಾಡಲಾಗಿರುವ ಒಟ್ಟು ವೆಚ್ಚ ಎಷ್ಟು; ಇದನ್ನು ಯಾವ ಮೂಲದಿಂದ ಭರಿಸಲಾಗಿದೆ;

ೠ) ಜನಸ್ಪಂದನ ಕಾರ್ಯಕ್ರಮ ಹಮ್ಮಿಕೊಂಡಿದ್ದ ಉದ್ದೇಶವೇನು; ಉದ್ದೇಶ ಈಡೇರಿದೆಯೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ತುಮಕೂರು, ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ಕೊಪ್ಪಳ, ಬಾಗಲಕೋಟೆ ಹಾಗೂ ಬಿಜಾಪುರ ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು.

ಇ)

1.	ಬೆಂಗಳೂರು ನಗರ	96
2.	ಬೆಂಗಳೂರು ಗ್ರಾಮಾಂತರ	266
3.	ತುಮಕೂರು	1286
4.	ಚಿತ್ರದುರ್ಗ	1710
5.	ದಾವಣಗೆರೆ	647
6.	ಬಳ್ಳಾರಿ	1147
7.	ಕೊಪ್ಪಳ	2639
8.	ಬಾಗಲಕೋಟೆ	627
9.	ಬಿಜಾಪುರ	1105
	ಒಟ್ಟು	**9523**

ಈ) 4708

ಅರ್ಹತೆ ಇಲ್ಲದಿರುವುದು.

ಉ) ಅರ್ಹಗೊಂಡು ಪರಿಹಾರ ಪಡೆದ ಅರ್ಜಿಗಳು – 2793

ಪರಿಶೀಲನಾ ಹಂತದೊಳಗಿನ ಅರ್ಜಿಗಳು – 2022

ಊ) ಸರ್ಕಾರದ ವಿವಿಧ ಹಂತದಲ್ಲಿ ತೀರ್ಮಾನ ತೆಗೆದುಕೊಳ್ಳಬೇಕಾಗಿರುವುದರಿಂದಲೂ ಕೆಲವು ಬಾಕಿ ಇರುತ್ತವೆ. 2004ನೇ ಜನವರಿ ತಿಂಗಳ ಒಳಗಾಗಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಋ) ಸುಮಾರು ರೂ. 3.00 ಲಕ್ಷಗಳು ಸರ್ಕಾರದ ಆಡಳಿತಾತ್ಮಕ ವೆಚ್ಚದಡಿ ಭರಿಸಲಾಗಿದೆ.

ಎ) ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಜನರೊಂದಿಗೆ ನೇರ ಸಂವಾದಕ್ಕಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ರಾಜ್ಯದಲ್ಲಿ 110 ಕೆ.ವಿ. ಸ್ಟೇಷನ್‌ಗಳ ಮಂಜೂರಾತಿಯ ಬಗ್ಗೆ

61 (265) : ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮನಗೌಡ (ತಿಕೋಟ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸರ್ಕಾರದ ಎಷ್ಟು 110 ಮತ್ತು 11 ಕೆ.ವಿ. ಸ್ಟೇಷನ್‌ಗಳನ್ನು ಮಂಜೂರು ಮಾಡಿದೆ;

ಆ) ಮಂಜೂರಾಗಿರತಕ್ಕಂತಹ 110:11 ಕೆ.ವಿ. ಸ್ಟೇಷನ್‌ಗಳು ಯಾವುವು, ಮತ್ತು ಯಾವ ದಿನಾಂಕದಂದು ಮಂಜೂರಾಗಿವೆ;

ಇ) ಮಂಜೂರಾಗಿರುವ ಸ್ಟೇಷನ್‌ಗಳಲ್ಲಿ ಪ್ರಾರಂಭಗೊಂಡಿರುವ ಹಾಗೂ ಪ್ರಾರಂಭವಾಗಿರದೇ ಇರುವ ಸ್ಟೇಷನ್‌ಗಳು ಯಾವುವು;

ಈ) ಪ್ರತಿಯೊಂದು ಸ್ಟೇಷನ್‌ಗಳನ್ನು ಪೂರ್ತಿಗೊಳಿಸುವುದಕ್ಕೋಸ್ಕರ ಸರ್ಕಾರ ಹಾಕಿಕೊಂಡಿತಕ್ಕಂತಹ ಕಾಲಮಿತಿಗಳೇನು;

ಉ) ಪ್ರಾರಂಭಗೊಂಡ ಸ್ಟೇಷನ್‌ಗಳ ಕಾಮಗಾರಿಗಳು ಈಗ ಯಾವ ಹಂತದಲ್ಲಿದೆ; ಉಳಿದ ಸ್ಟೇಷನ್‌ಗಳ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು;

ಊ) ಕೆಲಸಗಳ ಪ್ರಾರಂಭ ಮತ್ತು ಪ್ರಗತಿಯಲ್ಲಿ ಆಗಿರುವ ವಿಳಂಬಗಳಿಗೆ ಕಾರಣಗಳೇನು:

ಶ್ರೀ ಬಸವರಾಜಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುವ 110/11 ಕೆ.ವಿ. ಸಬ್ ಸ್ಟೇಷನ್‌ಗಳ ಒಟ್ಟು ಸಂಖ್ಯೆ 30.

ಆ) ಕಳೆದ ಮೂರು ವರ್ಷಗಳಲ್ಲಿ ಮಂಜೂರಾಗಿರುವ 110/11 ಕೆ.ವಿ. ಸಬ್ ಸ್ಟೇಷನ್‌ಗಳು ಹಗೂ ಅವುಗಳ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುವ ನಿರ್ದಿಷ್ಟ ವಿವರಗಳನ್ನು ಅನುಬಂಧ – 1 ರಲ್ಲಿ ಒದಗಿಸಿದೆ.

ಇ) ಪ್ರಾರಂಭಗೊಂಡಿರುವ ಹಾಗೂ ಪ್ರಾರಂಭವಾಗಿರದೇ ಇರುವ ಸ್ಟೇಷನ್‌ಗಳ ವಿವರಗಳನ್ನು ಅನುಬಂಧ–2 ರಲ್ಲಿ ನೀಡಿದೆ.